# ಅನಂತನಾಗ್ ಸಂಗ ಮರೆಯಲಿ ಹ್ಯಾಂಗ?

**ಚಿತ್ರೀಕರಣಕ್ಕಾಗಿ ಹಳ್ಳಿಗೆ ಬಂದಿದ್ದ ಹಿರಿಯ ನಟ ಅನಂತನಾಗ್ ಅವರೊಡನೆ ಮಾತನಾಡಿದ್ದು, ಅವರೊಂದಿಗೆ ಫೋಟೊ ಕ್ಲಿಕ್ಕಿಸಿಕೊಂಡಿದ್ದು ಎಂದಿಗೂ ಮರೆಯುವಂತಿಲ್ಲ.**

■ ವಾ. ಮುರಳೀಧರ ತೀರ್ಥಹಳ್ಳಿ



ಸುಮಾರು ಮೂವತ್ತೈದು ವರ್ಷಗಳ ಹಿಂದಿನ ಮಾತು. 1985–86 ನೇ ಇಸವಿ. ಶ್ರೇಷ್ಠ ನಟ ಅನಂತ ನಾಗರಕಟ್ಟೆ ತೀರ್ಥಹಳ್ಳಿಗೆ ಬಂದಿದ್ದರು. ತೀರ್ಥಹಳ್ಳಿಯ ಹೆಸರಾಂತ ಸಾಹಿತಿ ಯು.ಆರ್. ಅನಂತಮೂರ್ತಿ ಅವರ 'ಅವಸ್ಥೆ' ಕಾದಂಬರಿ ಆಧಾರಿತ ಅದೇ ಹೆಸರಿನ ಚಲನಚಿತ್ರದ ನಾಯಕ ಪಾತ್ರಧಾರಿಯಾಗಿ. ಕರ್ನಾಟಕ ಕಂಡ ಅಪ್ರತಿಮ ಸಮಾಜವಾದಿ ತೀರ್ಥಹಳ್ಳಿಯ ಶಾಂತವೇರಿ ಗೋಪಾಲ ಗೌಡರ ಕತೆ ಎನ್ನಲಾದ ಈ ಕಾದಂಬರಿಯನ್ನು ಕೃಷ್ಣ ಮಾಸಡಿ ತೆರೆಗೆ ತರಲು ಸಿದ್ಧತೆ ನಡೆಸಿದ್ದರು.

ಅಂದಿನ ಕಾಲದ ಹೆಸರಾಂತ ರಾಜಕಾರಣಿಗಳಾದ ಎಂ.ಪಿ.ಪ್ರಕಾಶ್, ಜೆ.ಎಚ್.ಪಟೇಲ್, ಅಬ್ದುಲ್ ನಜೀರ್ ಸಾಬ್, ಡಿ.ಬಿ. ಚಂದ್ರೇಗೌಡರ ಜೊತೆಗೆ ಬಿ.ವಿ.ಕಾರಂತ್, ಎಂ.ಭಕ್ತವತ್ಸಲ ಮೊದಲಾದ ಸಿನಿ ದಿಗ್ಗಜರೂ ಪಾತ್ರವರ್ಗದಲ್ಲಿ ಇದ್ದರು.

ಈ ಹಿಂದೆ ಕನ್ನೇಶ್ವರ ರಾಮ ಚಿತ್ರೀಕರಣಕ್ಕಾಗಿ ಸಮೀಪದ ಹೊಸನಗರದ ನಗರಕ್ಕೆ ಅನಂತನಾಗ್ ಬಂದಿದ್ದಾಗ ಭೇಟಿಯಾಗುವ ಪ್ರಯತ್ನ ಫಲಿಸಿರಲಿಲ್ಲ. ನಮ್ಮೂರು ತೀರ್ಥಹಳ್ಳಿ ಸಮೀಪದ ಶಿವರಾಜಪುರದಲ್ಲಿ ಚಿತ್ರೀಕರಣ ನಡೆಯುತ್ತಿತ್ತು. ಅನಂತನಾಗ್ ಕೃಷ್ಣೇಗೌಡನ ಪಾತ್ರದಲ್ಲಿ ಧರಣಿ ನಡೆಸುವ ಹಾಗೂ ಇನ್‌ಸ್ಪೆಕ್ಟರ್ ಪಾತ್ರದ ಪ್ರೊ. ಡಿ.ಎಸ್. ಸೋಮಶೇಖರ್ ಅನಂತನಾಗ್ ಅವರನ್ನು ಬಂಧಿಸುವ ದೃಶ್ಯಕ್ಕೆ ತಯಾರಿ ನಡೆದಿತ್ತು.

ತುಂಬಾ ಅಳುಕಿನಿಂದಲೇ ಅನಂತನಾಗ್ ಅವರ ಬಳಿ ಹೋಗಿ ಒಂದು ಫೋಟೊಗೆ ಮನವಿ ಸಲ್ಲಿಸಿದೆ. ಯಶಸ್ಸಿನ ಉತ್ತುಂಗದಲ್ಲಿದ್ದ ನಟ ಹೇಗೆ ಪ್ರತಿಕ್ರಿಯಿಸುತ್ತಾರೋ ಎಂಬ ಭಯವಿತ್ತು. ಅನಂತನಾಗ್ ಸಹಜವಾಗಿ ಹೊರ ಬಂದು, ಸುಲಭವಾಗಿ ಈ ಫೋಟೋಕ್ಕೆ ಸಾಕ್ಷಿಯಾದರು. ನಾನಂತೂ ಅವರ ಸರಳತೆಗೆ ಬೆರಗಾಗಿದ್ದೆ. ನನಗೆ ಆ ಕ್ಷಣಕ್ಕೆ ಕ್ಯಾಮೆರಾ ಕಡೆ ನೋಡಬೇಕೆನ್ನುವುದೂ ಮರೆತುಹೋಗಿತ್ತು.

ಮುಂದೆ ಅನಂತನಾಗ್ ರಾಜಕೀಯಕ್ಕೆ ಬಂದು, ಮಂತ್ರಿಯೂ ಆದರು. ವಿಭಿನ್ನ ಪಾತ್ರಗಳಲ್ಲಿ ನಟಿಸಿ ದಾಖಲೆ ಬರೆದರೂ ಇಂದಿಗೂ ಅದೇ ಸರಳತೆ ಮೆರೆಯುತ್ತಿದ್ದಾರೆ. ಇದು ಸವಿ ನೆನಪಾಗಿ ನನ್ನ ಮನದಾಳದಲ್ಲಿ ಉಳಿದಿದ್ದಾರೆ. ■